# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-8328/2015/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:21-08-2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ ವೆಂಕಟಗಿರಿಯಯ್ಯ ಬಿನ್ ತಿಮ್ಮಯ್ಯ, ವಾಸ: ತಿಮ್ಮೇಗೌಡನದೊಡ್ಡಿ ಗ್ರಾಮ, ಕಸಬಾ ಹೋಬಳಿ, ಹರಿಸಂದ್ರ ಅಂಚೆ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ ವೆಂಕಟಗಿರಿಯಯ್ಯ ಬಿನ್ ತಿಮ್ಮಯ್ಯ, ವಾಸ: ತಿಮ್ಮೇಗೌಡನದೊಡ್ಡಿ ಗ್ರಾಮ, ಕಸಬಾ ಹೋಬಳಿ, ಹರಿಸಂದ್ರ ಅಂಚೆ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ತಹಶೀಲ್ದಾರ ರಾಮನಗರ ತಾಲ್ಲೂಕು, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಹರಿಸಂದ್ರ ಗ್ರಾಮದ ಸರ್ವೆ ನಂ.254 ಬ್ಲಾಕ್ ನಂ.8 ರಲ್ಲಿ 2 ಎಕರೆ ಜಮೀನನ್ನು ಹಂಗಾಮಿ ಸಾಗುವಳಿಗಾಗಿ ಪಡೆದಿದ್ದೇನೆ. ಖಾಯಂ ಸಾಗುವಳಿ ಪತ್ರ ಕೊಡುವಂತೆ ಮತ್ತು ಜಮೀನು ಪೋಡಿ ಮಾಡಿಕೊಡುವಂತೆ ಎದುರುದಾರರಿಗೆ ಮೇ-2010 ಮತ್ತು ಅಕ್ಟೋಬರ್-2010 ರಲ್ಲಿ ಮನವಿ ಕೊಟ್ಟರೂ ಸಹ ಅನಾವಶ್ಯಕವಾಗಿ ಸುತ್ತಾಡಿಸುತ್ತಿದ್ದಾರೆ. ಜಮೀನಿನ ಸಾಗುವಳಿ ಪತ್ರ ಮತ್ತು ಪೋಡಿ ಮಾಡಿ ಕೊಟ್ಟಿರುವುದಿಲ್ಲ. ಆದ್ದರಿಂದ, ಎದುರದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ತಂದೆಗೆ ಹಂಗಾಮಿ ಸಾಗುವಳಿ ಚೀಟಿ ಕೊಡಲಾಗಿದೆ. ದೂರುದಾರರು ಸದರಿ ಜಮೀನಿನ ಸ್ವಾಧೀನದಲ್ಲಿದ್ದಾರೆ. ಡಿ.ಸಿ. ರಾಮನಗರ ಇವರಿಗೆ ಖಾಯಂ ಸಾಗುವಳಿ ಚೀಟಿ ಕೊಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಅಂತ ತಿಳಿಸಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಖಾಯಂ ಸಾಗುವಳಿ ಚೀಟಿ ಕೊಡುವಂತೆ ಪುನಃ ಕೋರಿಕೊಂಡಿದ್ದಾರೆ.

5. ಆದ ಕಾರಣ ಡಿ.ಸಿ. ರಾಮನಗರ ಇವರಿಗೆ ಸದರಿ ಪ್ರಸ್ತಾವನೆಯ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಕೇಳಲಾಗಿತ್ತು. ಅದರಲ್ಲಿ ಹಂಗಾಮಿ ಸಾಗುವಳಿಗಾಗಿ ಜಮೀನು ತೆಗೆದುಕೊಂಡಿದ್ದರೂ ಎನ್ನುವ ಬಗ್ಗೆ ಮೂಲ ಕಡತವು ಕಛೇರಿಯಲ್ಲಿ ಲಭ್ಯ ಇಲ್ಲ. ಬಗರ ಹುಕುಂ ಸಾಗುವಳಿ ಅಡಿಯಲ್ಲಿ ಸಕ್ರಮಗೊಳಿಸಕೊಳ್ಳಬೇಕಾದರೆ ಪಾಲಿಸಬೇಕಾದ ಷರತ್ತುಗಳು ಪೂರ್ತಿಯಾಗಿರುವುದಿಲ್ಲ. ದೂರುದಾರರು ಫಾರ್ಮ ನಂ.50 / 53 ಗಳನ್ನು ಸಲ್ಲಿಸದೇ ಇರುವುದರಿಂದ ಅರ್ಜಿಗಳನ್ನು ಪರಿಗಣಿಸಲು ಬರುವುದಿಲ್ಲ ಅಂತ ವರದಿಯನ್ನು ಸಲ್ಲಿಸಿದ್ದಾರೆ.

6. ಮೇಲಿನ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಅದನ್ನು ಪರಿಶೀಲಿಸಲಾಗಿ ಹಂಗಾಮಿ ಸಾಗುವಳಿ ಚೀಟಿಯ ಆಧಾರದ ಮೇಲೆ ಸಾಲವನ್ನು ಸಹ ತೆಗೆದುಕೊಂಡಿದ್ದೇನೆ. ನನ್ನ ತಂದೆಗೆ 1942 ರಲ್ಲಿಯೇ ಹಂಗಾಮಿ ಮಂಜೂರಾತಿ ಆಗಿ ಇಂದಿಗೂ ನಮ್ಮ ಸ್ವಾಧೀನದಲ್ಲಿದೆ. ಆದ್ದರಿಂದ, ಖಾಯಂ ಸಾಗುವಳಿ ಚೀಟಿ ಕೊಡಿಸಲು ಕೋರಿಕೊಂಡಿದ್ದಾರೆ.

7. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ಸಲ್ಲಿಸಿರುವ ಹಂಗಾಮಿ ಸಾಗುವಳಿ ಚೀಟಿಯು ಸ್ಪೇಷಲ್ ದರಕಾಸ್ತು ರಜಿಸ್ಟರ್ ನಂ.1367-1/41/42 ರಂತೆ ಇರುತ್ತದೆ. ಕ್ಲೋಜ್‌ಪೇಟೆ ತಾಲ್ಲೂಕಿನ ಅಮಲದಾರರು ದಿನಾಂಕ: 23-6-1942 ರಂದು ಹಂಗಾಮಿ ಸಾಗುವಳಿ ಚೀಟಿ ಕೊಟ್ಟಿದ್ದು ದೂರುದಾರರು ಕಂದಾಯ ಕಟ್ಟುತ್ತಿದ್ದಾರೆ. ಪಹಣಿ ಪತ್ರಿಕೆಗಳಲ್ಲಿಯೂ ಸಹ ಅವರ ಹೆಸರು ಇರುತ್ತದೆ. ಎದುರುದಾರರು ಒಪ್ಪಿಕೊಂಡಿರುವಂತೆ ಸುಮಾರು 72 ವರ್ಷಗಳಿಂದ ದೂರುದಾರರ ತಂದೆ ಮತ್ತು ದೂರುದಾರರು ಸದರಿ ಜಮೀನಿನ ಸ್ವಾಧೀನದಲ್ಲಿದ್ದಾರೆ. ಸದರಿ ಜಮೀನು ಪರಬಾರೆ ಆಗಿರುವುದಿಲ್ಲ. ಅಲ್ಲದೇ ದೂರುದಾರರು ಒಕ್ಕಲಿಗ ಜನಾಂಗಕ್ಕೆ ಸೇರಿದ್ದು, ಪಿ.ಟಿ.ಸಿ.ಎಲ್. ಕಾಯ್ದೆ ಅನ್ವಯಿಸುವುದಿಲ್ಲ. ಆದರೆ ಈಗ ಜಿಲ್ಲಾಧಿಕಾರಿಗಳು ಮೂಲ ಕಡತಗಳು ಲಭ್ಯ ಇಲ್ಲ ಎನ್ನುವ ಆಧಾರದ ಮೇರೆಗೆ ಖಾಯಂ ಸಾಗುವಳಿ ಚೀಟಿ ಕೊಡುವುದು ಕಷ್ಟಸಾಧ್ಯ ಎನ್ನುತ್ತಿದ್ದಾರೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಮೂಲ ಕಡತವು ಲಭ್ಯವಿಲ್ಲದಿದ್ದಲ್ಲಿ ಅದನ್ನು ಪುನಃ ರಚನೆ ಮಾಡಿ ದೂರುದಾರರಿಂದ ಲಭ್ಯವಿರುವ ದಾಖಲೆ ಪ್ರತಿಗಳನ್ನು ಪಡೆದು ಹಂಗಾಮಿ ಸಾಗುವಳಿ ಚೀಟಿಯು ಸ್ಪೇಷಲ್ ದರಕಾಸ್ತು ರಜಿಸ್ಟರ್ ನಂ.1367-1/41/42 ರ ದಾಖಲೆಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲು ಮತ್ತು ಖಾಯಂ ಸಾಗುವಳಿ ಚೀಟಿಯನ್ನು ಪಡೆಯಲು ದೂರುದಾರರ ಅರ್ಜಿಯನ್ನು ಪರಿಗಣಿಸಲು ಎದುರುದಾರರ ಶಿಸ್ತುಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 21/8/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.